# ರೋಚಕ ಆ್ಯಕ್ಷನ್ ಪಾತ್ರದ ನಿರೀಕ್ಷೆಯಲ್ಲಿ ಶ್ರೀವಿದ್ಯಾ

ಶ್ರೀವಿದ್ಯಾ ಶಾಸ್ತ್ರಿ
ಉದಯದ
'ಗಂಗೆ ಗೌರಿ'ಯ
ಗೌರಿ



◆ **ಗೌರಿಗೆ ಹಳೆಯ ಡ್ರೆಸ್ ಕೋಡ್ ಏಕೆ?**

ಹಳ್ಳಿಹುಡುಗಿ ಆಕೆ. ಆ ಪಾತ್ರವನ್ನು ನಾನು ನಿರ್ವಹಿಸುತ್ತಿದ್ದೇನೆ. ಗಂಗೆಯ ಅಕ್ಕನಾಗಿ ಕಾಣಿಸಿಕೊಂಡಿದ್ದೇನೆ. ಜೊತೆಗೆ ಗಾಯಕಿಯಾಗಿರುವ ನಾನು ಹೆಸರಿಗೆ ತಕ್ಕ ಹಾಗೆ ಗೌರಮ್ಮ, ತುಂಬ ಸಭ್ಯ ಹೆಣ್ಣುಮಗಳು. ಸಂಸ್ಕಾರವಂತಳಾದ ಆಕೆ ಹೆಚ್ಚು ಮಾತನಾಡುವುದಿಲ್ಲ. ಯಾವತ್ತೂ ಒಳ್ಳೆಯದರ ಬಗ್ಗೆ ಹೆಚ್ಚು ಯೋಚಿಸುತ್ತಾಳೆ. ಮನೆಮಂದಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಾಳೆ. ಗಂಗೆಗೆ ಎರಡನೇ ತಾಯಿಯಂತೆ ಕಾಣಿಸುತ್ತಾಳೆ. ಅಂತಹ ಗುಣವಂತೆಗೆ ಲಂಗ ದಾವಣಿ ಸೂಕ್ತ ಎನ್ನುವ ಕಾರಣಕ್ಕೆ ಆ ಡ್ರೆಸ್ ಕೊಟ್ಟಿದ್ದಾರೆ.

◆ **ನಟನೆಯೇ ವೃತ್ತಿ ಆಗಿದ್ದು ಹೇಗೆ?**

ಅಭಿನಯದಲ್ಲಿ ಆಸಕ್ತಿ ಇತ್ತು. ಮನೆಯಲ್ಲಿ ಓದು ನಂತರ ನೋಡೋಣ ಎಂದಿದ್ದರು. ಬಯೋಕೆಮಿಸ್ಟ್ರಿಯಲ್ಲಿ ಎಂ.ಎಸ್‌ಸಿ. ಮಾಡಿದೆ. ಹಾಗೆಂದು ಅಪ್ಪ ಅಮ್ಮನ ಒತ್ತಡಕ್ಕೇನೂ ನಾನು ಓದಿಲ್ಲ. ಓದಿನ ಮೇಲೆ ಇರುವ ಪ್ರೀತಿ ಮತ್ತು ಆಸಕ್ತಿಯೂ ಅದಕ್ಕೆ ಕಾರಣ. ಅದನ್ನೇ ಏಕೆ ಓದಿದೆ ಅಂದರೆ, ಪಿಯು ಓದುವಾಗ ವೈದ್ಯಳಾಗಬೇಕು ಎನ್ನುವ ಕನಸು ಕಂಡಿದ್ದೆ. ಅಂಕಗಳು ಕಡಿಮೆ ಬಂದಿದ್ದರಿಂದ ಅವಕಾಶ ಸಿಕ್ಕಿರಲಿಲ್ಲ. ಹಾಗಾಗಿ ವೈದ್ಯಕೀಯ ವಿಜ್ಞಾನಕ್ಕೆ ಸಂಬಂಧಿಸಿದ ವಿಷಯದಲ್ಲಿಯೇ ಸ್ನಾತಕೋತ್ತರ ಪದವಿಯನ್ನು ಪಡೆದೆ. ನನ್ನ ಆಸೆಯಂತೆ ಅಭಿನಯ ರಂಗಕ್ಕೆ ಬರಲು ಯೋಜನೆಯನ್ನು ಹಾಕಿಕೊಂಡೆ. ಕೂಡಲೇ ಎರಡು ತಿಂಗಳು ನಟನೆಗೆ ಸಂಬಂಧಿಸಿದಂತೆ ತರಬೇತಿಯನ್ನು ತೆಗೆದುಕೊಂಡೆ. ನಂತರ ಆಡಿಷನ್ ನೀಡಲು ಆರಂಭಿಸಿದೆ. ಮೊದಲಿಗೆ ಸಿನಿಮಾದಲ್ಲಿ ಅವಕಾಶ ಸಿಕ್ಕಿತು. ಅದಾದ ಕೂಡಲೇ ಸ್ಟಾರ್ ಸುವರ್ಣದಲ್ಲಿ 'ಬೆಟ್ಟದ ಹೂ' ಧಾರಾವಾಹಿಗೆ ಆಡಿಷನ್ ನೀಡಿದೆ. ಅದೇ ನನ್ನ ಮೊದಲ ಧಾರಾವಾಹಿ. ಆ ಪಾತ್ರವೇ ನನಗೆ ಈ ಅವಕಾಶವನ್ನು ತಂದುಕೊಟ್ಟಿದೆ. ಈ ಪಾತ್ರಕ್ಕೆ ಸೂಕ್ತ ಆಗುತ್ತೇನೆ ಎನ್ನುವ ನಿರೀಕ್ಷೆಯನ್ನು ನಮ್ಮ ತಂಡ ಇಟ್ಟುಕೊಂಡಿದೆ. ಅದನ್ನು ಫುಲ್‌ಫಿಲ್ ಮಾಡುವುದು ನನ್ನ ಕೆಲಸ.

◆ **ಲ್ಯಾಬ್‌ನಲ್ಲಿ ಪ್ರಯೋಗ ಮಾಡುತ್ತಿದ್ದವರು, ನೀವೇ ಪ್ರಯೋಗಕ್ಕೆ ಒಳಗಾಗುತ್ತಿದ್ದೀರಿ. ಹೊಸ ಹೊಣೆಯನ್ನು ಹೇಗೆ ನಿಭಾಯಿಸುತ್ತೀರಿ?**

ಅದೇ ಬೇರೆ ರೀತಿಯ ಹಾದಿ. ಇದು ಮತ್ತೊಂದು ದಿಕ್ಕಿನ ಬೀದಿ. ಎರಡನ್ನೂ ನಿಭಾಯಿಸಬಲ್ಲೆ ಎನ್ನುವ ವಿಶ್ವಾಸ ನನಗೆ ಇದೆ. ಪ್ರಯೋಗಶಾಲೆಯಲ್ಲಿ ಮ್ಯಾನುವಲ್ ಇರುತ್ತದೆ ಅದನ್ನು ಸಾಧಿಸಿ ತೋರಿಸುವುದು ನಮ್ಮ ಪಾಠ. ಅಲ್ಲಿ ನಾನೇ ಹೊಸದೇನನ್ನೂ ಸಂಶೋಧಿಸುವುದಿಲ್ಲ. ಸಂಶೋಧನೆಗೆ ಬೇಕಾಗುವ ಸಿದ್ಧತೆ ಮತ್ತು ಕ್ರಮವನ್ನು ಕಲಿಯುತ್ತೇವೆ. ಇಲ್ಲಿ ಸ್ಕ್ರಿಪ್ಟ್ ಬೇರೊಂದು ರೂಪದಲ್ಲಿ ಮ್ಯಾನುವಲ್ ಆಗಿ ಎದುರಾಗುತ್ತದೆ. ಅದನ್ನು ಕ್ಯಾಮೆರಾ ಎದುರು ಅಭಿನಯಿಸಿ ತೋರಿಸಬೇಕಿದೆ. ಒಟ್ಟಿನಲ್ಲಿ ವಿಜ್ಞಾನ ಪ್ರಯೋಗಾಲಯದಂತೆ, ಕಲಾ ಪ್ರಯೋಗಾಲಯದಲ್ಲಿ ನನ್ನ ಶೋಧ ಕಾರ್ಯ ನಡೆಯುತ್ತಿದೆ. ಎರಡನ್ನೂ ನಾನು ಸಂತೋಷದಿಂದ ಅನುಭವಿಸುತ್ತೇನೆ.

◆ **ಇಂಡಸ್ಟ್ರಿಯ ಅನಿಶ್ಚಿತ ಬದುಕಿನ ಸವಾಲಿಗೆ ಹೇಗೆ ಸಿದ್ಧತೆ ಮಾಡಿಕೊಂಡಿದ್ದೀರಿ?**

ಅನಿಶ್ಚಿತ ಎನ್ನುವುದು ಈ ಕ್ಷೇತ್ರದ ಭಾಗ. ಅದನ್ನು ಪರಿಹರಿಸಲು ಸಾಧ್ಯ ಇಲ್ಲ. ಕೆಲಸ ಇಲ್ಲದ ಸಂದರ್ಭದಲ್ಲೂ ನಾನು ಅವಕಾಶಕ್ಕಾಗಿ ಕಾಯದೆ ನನ್ನ ಪ್ರಯತ್ನವನ್ನು ಮಾಡುತ್ತೇನೆ. ಅಷ್ಟಕ್ಕೂ ಯಾವ ಪಾತ್ರವೂ ಸಿಗದೇ ಇದ್ದ ಪಕ್ಷದಲ್ಲಿ ಆರ್ಥಿಕ ಅಭದ್ರತೆಯ ಭಯವಂತೂ ಇಲ್ಲ. ಜೀವನದ ಭದ್ರತೆಗೆ ಯಾವತ್ತೂ ನನ್ನ ಪದವಿ, ಜ್ಞಾನ ಇರುತ್ತದೆ. ಅದರ ಜೊತೆ ಅಭಿನಯ ಪ್ಯಾಶನ್ ಜೀವಂತವಾಗಿ ಇರುತ್ತದೆ. ಪರ್ಯಾಯ ಅವಕಾಶ ಯಾವತ್ತೂ ನನಗಿರುತ್ತದೆ.

◆ **ನಿಮ್ಮ ಕನಸಿನ ಪಾತ್ರದ ಬಗ್ಗೆ ಹೇಳುವುದಾದರೆ...**

ಈಗ ನಾನು ಅಭಿನಯಿಸುತ್ತಿರುವ 'ಗೌರಿ' ರೀತಿಯ ಪಾತ್ರವನ್ನೇ ಮಾಡಬೇಕು ಎನ್ನುವುದು ಬಹುದಿನಗಳ ಕನಸಾಗಿತ್ತು. ನನ್ನ ವ್ಯಕ್ತಿತ್ವಕ್ಕೆ ಆಕೆ ಬಹುತೇಕ ಹೋಲಿಕೆ ಆಗುತ್ತಾಳೆ. ನನ್ನ ಕನಸು ಸಾಕಾರಗೊಂಡಿದೆ ಎಂದು ಅನ್ನಿಸುತ್ತಿದೆ. ನಟಿಯಾಗಿ ಎಲ್ಲ ರೀತಿಯ ಪಾತ್ರಗಳನ್ನು ಮಾಡಬೇಕು. ಮುಂದೆ ಆ್ಯಕ್ಷನ್ ಇಲ್ಲವೇ ಪೌರಾಣಿಕ ಕಥೆಯ ಪಾತ್ರವನ್ನು ಮಾಡುವ ಆಸೆಯಿದೆ. ನನ್ನ ಮಿತಿಯಲ್ಲಿ ಎಂತಹ ಪಾತ್ರವಿದ್ದರೂ ಅದಕ್ಕೆ ನಾನು ಜೀವ ತುಂಬುತ್ತೇನೆ.

◆ **ಕ್ಯಾಂಪಸ್‌ನಿಂದ ಶೂಟಿಂಗ್ ಮನೆಗೆ ಬಂದ ದಿನ ಹೇಗಿತ್ತು?**

ಮೊದಲು ಬಂದಾಗ ತುಂಬ ಕಷ್ಟ ಅನ್ನಿಸಿತ್ತು. ಓದು ಮುಗಿಯುತ್ತಿದ್ದಂತೆ ಅಭಿನಯ ತರಗತಿಗೆ ಸೇರಿದೆ. ಅದಾಗಿ ಕೆಲವೇ ದಿನಗಳಲ್ಲಿ ಅವಕಾಶವೂ ಸಿಕ್ಕಿತು. ಒಂದು ರೀತಿಯಲ್ಲಿ ಎಲ್ಲ ತಕ್ಷಣಕ್ಕೆ ಘಟಿಸಿದವು. ಇದಕ್ಕಾಗಿ ಸಿದ್ಧತೆಯನ್ನು ಮಾಡಿಕೊಳ್ಳಲು ಸಾಧ್ಯ ಆಗಲಿಲ್ಲ. ಸಿದ್ಧಗೊಂಡಿದ್ದರೆ ಒಂದಿಷ್ಟು ಐಡಿಯಾ ಇರ್ತಿತ್ತು. ಪಾತ್ರ ಸವಾಲಿನಿಂದ ಕೂಡಿತ್ತು. ಕೆಲಸದ ಒತ್ತಡವೂ ಹೆಚ್ಚಿತ್ತು. ಕ್ರಮೇಣ ಈ ವಾತಾವರಣಕ್ಕೆ ನಾನು ಹೊಂದಿಕೊಂಡೆ.

■ **ರಾಘವೇಂದ್ರ ಕೆ.**